ರಂಗನಾ ನೋಡಿರೊ ಸಿರಿ ನರಸಿಂಗನ ಪಾಡಿರೊ
ಮಂಗಳಮೂರುತಿ ಡಿಂಗರಿಗರ ಹೃತ್ಸಂಗ ಕರುಣಾಂತರಂಗಾ||ಪ||

ತನುಜನ ಜನಕನು ಕೊಲ್ಲಲು ಮೊರೆಯಿಡೆ ಬಂದಾ | ಕಂಬದೊಳಿಂದ
ಮನುಜಕೇಸರಿ ರೂಪಧರಿಸಿದ ನಿಜಲೋಕಸ್ವಾಮಿ | ಅಂತರ್ಯಾಮಿ
ದನುಜನ ಉದರ ಬಗೆದು ಕರುಳಮಾಲೆ ಇಟ್ವಾ | ಕೊರಳೊಳು ಧಿಟ್ವಾ
ವನಜ ಭವಾದ್ಯರು ಜಯಜಯವೆನುತಿರೆ ಮೆರೆದಾ ಪ್ರಹ್ಲಾದವರದಾ |೧|

ಮನದಲಿ ಬೇಡಿದ ಭಾಗ್ಯವ ಕೊಡುವನು ಚೆಲುವಾ | ಭಕುತರಿಗೊಲಿವಾ
ಅನುದಿನದಲಿ ಅನುಕಂಪನು ಹರಿ ನಮಗೆಲ್ಲಾ | ಭಕ್ತವತ್ಸಲಾ
ಘನಮಹಿಮನು ಪರಿಪೂರ್ಣ ಗುಣಾಂಬುಧಿ ತೇಜ | ರಾಜಾಧಿರಾಜ
ಜನುಮ ಜನುಮದಲಿ ಜನನಾದಿಗಳಿಗೀತ ಮುಖ್ಯ | ಕರ್ತನು ಸಖ್ಯ |೨|

ಕನಕಮುನೀಶ್ವರ ತಪವನು ಮಾಡಲು ಮೆಚ್ಚಿ | ಬಂದನು ಮೆಚ್ಚಿ
ಕನಕ ವರುಷವನು ಗರೆವುದು ಅಮ್ದಿನ ದಿನದಿ | ಆನಂದವನಧಿ
ಕನಕ ನೃಕೇಸರಿ ಎನಿಸಿದಾ ಅಂದಿನಾರಭ್ಯಾ | ಈತನೆ ಸಭ್ಯಾ
ಅನಳನಯನರೂಪ ಲಿಂಗಾಕೃತಿಯಾ ಪೊಳೆವಾ | ನುತಿಸಲು ಸುಳಿವಾ |೩|

ಗುಣದಲಿ ತಿಳಿವದು ರುದ್ರಗೆ ಹರಿರೂಪವಿಲ್ಲಾ | ಇದು ಪುಸಿಯಲ್ಲಾ
ವನಜನಾಭಗೆ ನಾನಾರೂಪಗಳುಂಟೆಂದು ವೇದಾ | ಪೇಳ್ವದು ನೋಡಾ
ಪ್ರಣತನಾಗದ ಇನಿತಾಗದ ಪಾಪಿಷ್ಠ ಮನುಜಾ | ಅವನೇ ದನುಜಾ
ಗಣನೆ ಮಾಡದಲಿರಿ ಇವರನು ಸುಜನರು ಇಂದೇ | ನಮಗೀತ ತಂದೆ|೪|

ಇವನಂತೆ ಒಪ್ಪುವ ಪೊಂಪಾ ನಿಧಿಯೊಳು ಧನದಾ|ದಿಕ್ಕಿಲಗಾಧಾ
ಮುನಿಜನಸಮ್ಮತ ಶ್ರುತಿ ಉಕ್ತಿಗಳಲ್ಲಿ ಅಕ್ಕು | ಕೇಳೀವಾಕ್ಕು
ಮಣಿದು ನಮಿಸಿ ಒಮ್ಮೆ ಧ್ಯಾನವ ಮಾಡಲು ಭಕುತಿ | ಉಂಟು ವಿರಕುತಿ
ಹನುಮಧೀಶ್ವರ ನಮ್ಮ ವಿಜಯವಿಠ್ಠಲ ನರಸಿಂಗಾ | ರಿಪುಗಜಸಿಂಗಾ |೫|

# ನಿನ್ನ ದರುಷನಕೆ ಬಂದವನಲ್ಲವೋ

ನಿನ್ನ ದರುಷನಕೆ ಬಂದವನಲ್ಲವೋ
ಪುಣ್ಯವಂತರ ದಿವ್ಯಚರಣ ನೋಡಲಿ ಬಂದೆ ||ಪ||

ಎಲ್ಲೆಲ್ಲಿ ನಿನ್ನ ವ್ಯಾಪ್ತತನವಿರಲಿಕ್ಕೆ
ಇಲ್ಲಿಗೆ ಬರುವ ಕಾರಣವಾವುದೋ
ಸೊಲ್ಲಿಗೆ ಕಂಭದಿ ತೋರಿದ ಮಹಾಮಹಿಮ
ಅಲ್ಲಿ ಇಲ್ಲೇನಯ್ಯಾ ಬಲ್ಲ ಭಜಕರಿಗೆ |೧|

ಕರೆದಾಗಲೆ ಓಡಿ ಬಂದೊದಗುವ ಸ್ವಾಮಿ
ಮರಳಿ ಗಾವುದವೆಣಿಸಿ ಬರಲ್ಯಾತಕೊ
ನೆರೆ ನಂಬಿದವರಿಗೆ ಅವಲ್ಲಿಯಾದರೆ ಏನು
ಅರಿದವರ ಮನದೊಳಗೆ ನಿಂದಾಡುವ ಚೆಂದವ|೨|

ಕಠಿಣವೊ ನಿನ್ನ ಭಕುತರನು ನೋಡುವ ಲಾಭ
ಸಟೆಯಲ್ಲ ವೇದಗಳು ಸಾರುತಿವೆಯೋ
ವಟು ಮೊದಲಾದ ವೈಷ್ಣವಾಗ್ರೇಸರಂಘ್ರಿ
ತ್ರುಟಿಯಾದರೂ ಸೋಕಲು ಗತಿಗೆ ದಾರಿ|೩|

ಧ್ಯಾನಕ್ಕೆ ಸಿಲುಕುವವನೆ ನಿನ್ನ ಕಾಣಲಿಬಹುದು
ಜ್ಞಾನಿಗಳು ಎಂತು ಬರುವರೊ ಅಲ್ಲಿಗೆ
ಅನಂತ ಜನುಮದಲಿ ಜಪ ತಪ ಹೋಮ ವ್ರತ
ಏನೇನು ಮಾಡಿದರು ಇಷ್ಟು ಜನ ಕೂಡುವದೆ|೪|

ನೀನಿದ್ದ ಸ್ಥಾನದಲಿ ಸಕಲ ಪುಣ್ಯಕ್ಷೇತ್ರ
ನೀನಿದ್ದ ಸ್ಥಾನದಲಿ ಸರ್ವ ತೀರ್ಥ
ನೀನಿದ್ದ ಸ್ಥಾನದಲಿ ಸಮಸ್ತ ತಾತ್ವಿಕರು
ನಾನಿತ್ತ ಬರುವದು ನಿನಗೆ ತಿಳಿಯದೆ ಸ್ವಾಮಿ|೫|

ಇದನೆ ಪಾಲಿಸು ಜೀಯಾ ನಿನ್ನದೊಂದೇ ಮೂರ್ತಿ
ನಿದರ್ಶನವಲ್ಲದೆ ಮಿಗಿಲಾವುದೋ

ಸತ್ಯವಂತರ ಸಂಗವಿರಲು ತೀರ್ಥವೇತಕೆ
ನಿತ್ಯ ಅನ್ನದಾನವಿರಲು ಭಯವು ಏತಕೆ ||ಪ||

ಗುರುಹಿರಿಯರ ಅರಿಯದವನ ಅರಿವದೇತಕೆ
ಪರಹಿತಾರ್ಥಕಿಲ್ಲದವನ ಶರೀರವೇತಕೆ
ಹರಿಯ ಪೂಜೆ ಮಾಡದವನ ಜನುಮವೇತಕೆ
ಸೇರಿದವರ ಹೊರೆಯದಂಥ ದೊರೆಯು ಏತಕೆ|೧|

ಮಾತು ಕೇಳದೆ ಮಲೆತು ನಡೆವ ಮಕ್ಕಳೇತಕೆ
ಭೀತನಾಗಿ ಓಡಿಬರುವ ಬಂಟನೇತಕೆ
ಪ್ರೀತಿಯಿಲ್ಲದೆ ಎಡೆಯಲಿಕ್ಕಿದ ಊಟವೇತಕೆ
ಸೋತ ಹೆಣ್ಣಿಗೆ ಓತು ನಡೆಯದ ಸುಗುಣವೇತಕೆ|೨|

ತಾನು ಉಣ್ಣದ ಪರರಿಗಿಕ್ಕದ ಧನವಿದ್ದೇತಕೆ
ಮಾನಹೀನವಾಗಿ ಬಾಳ್ವ ಮನುಜನೇತಕೆ
ನ್ಯೂನ ಹೆಚ್ಚು ನೋಡುವಲ್ಲಿ ಇರುವುದೇತಕೆ
ತನ್ನ ಬಳಗವೆರಸಿ ಉಣ್ಣದ ಭಾಗ್ಯವೇತಕೆ|೩|

ತಾನು ತನ್ನನರಿಯದಂಥ ಪ್ರೌಢನೇತಕೆ
ಸ್ನಾನ ಸಂಧ್ಯಾನವಿಲ್ಲದ ಶೀಲವೇತಕೆ
ಜ್ಞಾನವಿಲ್ಲದೆ ನೂರುಕಾಲ ಬದುಕಲೇತಕೆ
ಧ್ಯಾನದೊಳಗೆ ಕೃಷ್ಣನಿಲ್ಲದ ತನುವಿದ್ದೇತಕೆ|೪|

ಸನ್ನೆಯರಿತು ನಡೆಯದಂಥ ಸತಿಯಿದ್ದೇತಕೆ
ಭಿನ್ನವರಿತು ನಡೆಯದಂಥ ಸ್ನೇಹವೇತಕೆ
ಮುನ್ನ ಕೊಟ್ಟು ಪಡೆಯಲಿಲ್ಲ ಬಯಸಲೇತಕೆ
ಚೆನ್ನ ಆದಿಕೇಶವನಿರಲು ಬೇರೆ ದೈವವೇತಕೆ|೫|

**1 ಏನೂ ಒಲ್ಲೆ ಶ್ರೀಹರಿ ನಿನ್ನ ಸ್ತುತಿಸಿ ಕೇಳೋದು ||ಪ||**

**ಜ್ಞಾನ ಭಕ್ತಿ ಕೊಡು ನಮಗದೊಂದೆ ದೊಡ್ಡದು|ಅ.ಪ|**

**ಹಿಂದೆ ಎನ್ನ ಅಂದವರೆಲ್ಲಾ ಅಂದಣವೇರಲಿ**
**ಮುಂದೆ ಎನ್ನ ಬೈದೊರೆಲ್ಲಾ ಚೆನ್ನಾಗಿರಲಿ**
**ಕುಂದು ಇಟ್ಟವರೆಲ್ಲಾ ಕುದುರೆಕಟ್ಟಿ ಬಾಳಲಿ**
**ಬಂದು ಒದ್ದವರಿಗೆ ಭತ್ತದ ಗದ್ದೆ ಬೆಳೆಯಲಿ|೧|**

**ಎನಗೊಂದು ನೆವದಿಂದ ಕಾಡಿದವರಿಗೆ**
**ಹೊನ್ನು ಹೆಣ್ಣು ಗಂಡು ಮಕ್ಕಳಾಗಲಿ ಅವರಿಗೆ**
**ಕಂಡು ಕಂಡು ಎನ್ನ ಭಾದೆ ಪಡಿಸಿದವರಿಗೆ**
**ಕನ್ಯಾದಾನದ ಫಲವು ಬಂದು ತಟ್ಟಲಿ ಅವರಿಗೆ|೨|**

**ಮಂದಿಯೊಳಗೆ ಮಾನಭಂಗ ಮಾಡಿದವರಿಗೆ**
**ಜೇನುತುಪ್ಪ ಸಕ್ಕರೆ ಊಟ ಆಗಲಿ ಅವರಿಗೆ**
**ಹಾನಿ ಬಾರದಂಥ ಲೋಕ ಆಗಲಿ ಅವರಿಗೆ**
**ಮಹಾನುಭಾವ ಮುಕ್ತಿಯ ಕೊಡು ನೆಲೆಯಾದಿಕೇಶವ|೩|**

***

**2 .ಹನುಮಂತ ಹನುಮಂತ ಹನುಮಂತ ||ಪ||**

ಹನುಮಂತ ಹನುಮಂತ ಹನುಮಂತ ||ಪ||

ಹನುಮಂತ ಹರಿಯ ಮತ ನಿರುತ ಗುಣಯುತ
ಜನರ ಪೊರೆಯುತ ತತುವರೊಳು ಪ್ರೇರಿತ|ಅ.ಪ|

ಪವಮಾನ ಪವಮಾನ ಪವಮಾನ ಪವಮಾನ ಪರಮ
ಪಾವನ ಅಣುಮಹದ್ವನ ವನಧಿಲಂಘನ
ವೀತಿಹೋತ್ರನ ಪಡಿಸಿತೃಪ್ತನ
ರಾಮವಂದನ ಮಾಡುತ ಮನದಿ ಆನಂದ ಆನಂದ ಆನಂದ
ಆನಂದದಿಂದ ತ್ವರಿಯಾ ಹಾರಿ ಶರಧಿಯಾ ಸೀತಾಕೃತಿಯಾ
ಕುಶಲವಾರ್ತೆಯ ಪೇಳಲು ಜೀಯಾ
ಹರುಷ ಅತಿಶಯ ಉಕ್ಕಲು ಕೈಯ

ರಾಮಾಲಿಂಗನದಿಂದ ಆನಂದ ತಾ ನಿಂದ ತಾ ನಿಂದ ತಾ ನಿಂದ

ತಾ ನಿಂದ ಕಪಿಗಳ ವೃಂದಾ

ನೆರಹಿ ಆನಂದ ರಣಮುಖಕೆಂದಾ

ಶಿಲೆಗಳ ತಂದ ಸೇತುಬಂಧನ

ಮಾಡಿಸಿ ನಿಂದಾ ರಾವಣವಧೆಗೆಂದಾ |೧|

ಶ್ರೀರಾಮ ಶ್ರೀರಾಮ ಶ್ರೀರಾಮ

ಶ್ರೀರಾಮ ಪದ ಪ್ರೀತ ಪ್ರಖ್ಯಾತ

ಪ್ರಖ್ಯಾತ ಪ್ರಖ್ಯಾತ ವರಧೃತ ತ್ರಿಜಗ ಖ್ಯಾತ ಅತಿ ಮಹಾರಥ

ಯದುಪತಿ ಪ್ರೀತಾ ಸುರರ ಸೇವಿತಾ ಗರಳಭುಂಜಿತಾ

ಸತಿಗೆ ಪೂವಿತ್ತ ಭುಜಬಲಯುತಾ ಧೀಮಂತಾ

ಧೀಮಂತಾ ಧೀಮಂತಾ ಧೀಮಂತಾ ಭಾರತೀಕಾಂತಾ

ದುರಳ ಮಣಿಮಂತಾ ಸೆಣಸಿಬರೆ ನಿಂತಾ

ಹರಣ ಮಾಡಿ ಪಂಥಗೆಲಿದು ತಾ ನಿಂದಾ

ಪ್ರಣಯನಾಗಿ ನಿಂತಾ ಕೀಚಕನ ಧ್ವಾಂತದೊಳು ತಾ

ನೋಡಿ ತಾ ನೋಡಿ ತಾ ನೋಡಿ ತಾ ನೋಡಿ ಅವನೊಳು

ಕೂಡಿ ಕೈಯ ಹಿಡಿದಾಡಿ ಕೇಳಿಯೊಳು ಕೂಡಿ ಉರದಿಶಿರ

ನೀಡಿ ಮಾಂಸಮುದ್ದೆಮಾಡಿ

ನೆಲಕೆ ಈಡಾಡಿ ನಲಿದು ತೋರಿದಾ |೨|

ಆನಂದ ಆನಂದ ಆನಂದ ಆನಂದ ತಾ ನಿಂದ ಶ್ರೀಮ

ದಾನಂದ ಆನಂದ ಬುಧಜನಕ್ಲೇಶದಿಹ ಮನ ನೋಡಿ ಜೀ

ವನ ಸೂತ್ರ ವ್ಯಾಖ್ಯಾನ ಮಾಡಿ ಪಾವನ ವಾದಿಭಂಜನ

ಬಾದರಾಯಣ ಪ್ರೀತಿಪಾತ್ರ ಏಕಾಂತ ಭಕ್ತ ತಾನಿತ್ತ

ತಾನಿತ್ತ ತಾನಿತ್ತ ತಾನಿತ್ತ ಜಗಕತಿಮೋದ ಶಾಸ್ತ್ರ

ಸನ್ಮುದ ತೋರಿಸರ್ವದ ಜೀವರು ತ್ರಿವಿಧ ತರತಮಭೇದ

ಜಗ ಸತ್ಯ ಜಗವು ಸತ್ಯ ಜೀವರು ನಿತ್ಯ ಕಾರಣ ನಿತ್ಯ

ಕಾರ್ಯ ಅನಿತ್ಯ ಪ್ರಕೃತಿ ಸತ್ಯ ಸುಗುಣವೆ ನಿತ್ಯ

ಭೇದವು ನಿತ್ಯ ದ್ವೈತವು ಸತ್ಯವೆಂದ ಶ್ರೀ

ವೆಂಕಟೇಶನ ನಿಜದೂತ |೩|

3 ಹನುಮಂತ ಹನುಮಂತ ||ಪ||

ಗುಣನಿಧಿ ಹರಿಪದ ವನಜ ಸದಾರ್ಚಕ |ಅ.ಪ|

ಅಂಜನಿ ಕುವರ ಧನಂಜಯ ರಕ್ಷಕ
ಭಂಜಿಸಿ ದೈತ್ಯಪ್ರಭಂಜನಾಖ್ಯ |೧|

ಬಕಮುಖ ಹನ ಕೀಚರ ಧ್ವಂಸಕ
ವಿಕಳರ ಗೈದರಿ ದುಷ್ಕುಲ ನಾಶಕ |೨|

ಮತ್ತಮಾಯಿಗಜ ಕುತ್ತಿದ ಕೇಸರಿ
ವತ್ತಿ ಪೇಳ್ದೆಹರಿ ಉತ್ಕರ್ಷಗಳನು|೩|

ಇನ್ವನ ಪಾಲಕ ಇನಜ ಗರ್ವಹರ
ಮಣಿಮನ ಮತವನ ಅನಲ ದಾವಾಖ್ಯ|೪|

ಹರಿ ಪ್ರಥಮಾಂಗನೇ ಉರಗ ವಿಪಗುರು
ಗುರು ಗೋವಿಂದವಿಠಲನ ಸೇವಕ|೫|

4 ಏನು ಬರುವುದೊ ಸಂಗಡೇನು ಬರುವುದೊ||ಪ||

ದಾನ ಧರ್ಮ ಮಾಡಿ ಬಹು ನೀ ಧಾನಿಯೆನಿಸಿಕೊಳ್ಳೊ ಮನುಜ|ಅ.ಪ|

ಹೆಂಡಿರಿಲ್ಲಿ ಮಕ್ಕಳಿಲ್ಲಿ ಬಂಡಿತುಂಬ ಭಾಗ್ಯವಿಲ್ಲಿ
ಮಂಡೆತುಂಬ ಬಂಧುಬಳಗ ಇಲ್ಲಿ ಇರುವರೊ
ಕೊಂಡು ದೂತರೆಳೆದು ಒಯ್ದು ಹಿಂಡಿಹಿಪ್ಪೆ ಮಾಡುವಾಗ
ಕಂಡು ಬಿಡಿಸಿಕೊಂಬರಾರೊ ಕೀರ್ತಿಯಪಕೀರ್ತಿಯೆರಡೆ|೧|

ಎನ್ನದೆಂದು ತನ್ನದೆಂದು ಹೊನ್ನು ಹೆಣ್ಣು ಮಣ್ಣಿಗಾಗಿ
ಬನ್ನಬಟ್ಟು ಬಾಯಬಿಡುವೆ ಬರಿದೆ ಮೋಹದಿ
ಸನ್ನುತದಲಿ ಪರಹಿತಾರ್ಥಮಾಡಿ ಪುಣ್ಯಪಡೆಯೊ ನೀನು
ಇನ್ನು ಮುಂದೆ ಕಿತ್ತು ತಿಂಬ ಕೂಪದಲ್ಲಿ ಕೆಡಲು ಬೇಡ ಮನುಜ|೨|

ಬತ್ತಲಿಂದ ಬರುತಲಿಹರು ಬತ್ತಲಿಂದ ಹೋಗುತಿಹರು
ಕತ್ತಲೆಕಾಳ ಬೆಳಗಮಾಡಿ ಹೊತ್ತುಗಳೆವರೊ
ಸತ್ತರಿಲ್ಲ ಅತ್ತರಿಲ್ಲ ಹೊತ್ತುಕೊಂಡು ಹೋಹರಲ್ಲಿ
ವ್ಯರ್ಥ ದೇಹ ಮಣ್ಣುಕೂಡಿಸಿದಂತೆ ಕೆಡಬೇಡ ಮನುಜ |೩|

ಕಟ್ಟಲಿಲ್ಲ ಬಿಚ್ಚಲಿಲ್ಲ ಕಷ್ಟಪಟ್ಟು ಬಳಲಲಿಲ್ಲ
ಸುಟ್ಟು ಸುಟ್ಟು ಸುಣ್ಣದ ಹರಳು ಆಯಿತೀ ಕಾಯವನ್ನು
ಬಿಟ್ಟು ಹೋಗುವಾಗ ಚೋಟು ಬಟ್ಟೆ ನಿನಗೆ ಹೊಂದಲಿಲ್ಲ
ದೃಷ್ಟ ನೋಡು ಕಟ್ಟಕಡೆಗೆ ಬಟ್ಟಬಯಲಾಗುತಿದೆ|೪|

ಗರುವದ ಹೊರೆಯಿಂದ ನೀನು ಬರಿದೆ ಕಾಲ ಕಳೆದೆ ಮುಂ
ದರಿದು ನೋಡು ನರರ ತನುವು ದೊರಕಲರಿಯದು
ನೆರೆ ಮಹಾಮೂರ್ತಿಯೊಡೆಯ ಪರಮ ಬಾಡಾದಿಕೇಶವ
ಚರಣ ಭಜಿಸಿ ಚಂಚಲವಳಿದು ವರವ ಪಡೆದು ಹೊಂದು ಮುಕುತಿ |೫|

5 ಇರಬಂದುದಿಲ್ಲ ಸಂಸಾರ ಇದ
ನರಿತು ಹರಿಯ ಸ್ಮರಣೆಯನು ಮಾಡೊ ಮನುಜ ||ಪ||

ಧರಣಿಪ ತ್ರಿಶಂಕು ಆಳಿದ ರಾಯ ತಾನೆಲ್ಲಿ
ಹರಿಶ್ಚಂದ್ರ ಮೊದಲಾದ ಚಕ್ರವರ್ತಿಗಳೆಲ್ಲಿ
ಶರಧಿಮಧ್ಯದೊಳಿದ್ದ ರಾವಣಾಸುರನೆಲ್ಲಿ
ಸಿರಿಯುಳ್ಳ ಕೌರವರು ಪಾಂಡವರು ತಾವೆಲ್ಲಿ
ನೆರೆಗೆಲಿದ ವಾಲಿ ತಾನೆಲ್ಲಿ ಬಲು
ಸುರರೊಡನೆ ಹೋರಿದ ಬಲಿಯು ತಾನೆಲ್ಲಿ |೧|

ದಶರಥ ಮೊದಲು ಷೋಡಶ ಮಹಾರಾಯರೆಲ್ಲಿ
ಅಸಹಾಯ ಶೂರ ವೀರ ವಿಕ್ರಮನೆಲ್ಲಿ
ವಸುಮತಿ ಹಿರಣ್ಯಾಕ್ಷನೆಲ್ಲಿ
ವಸುಧೆಯೊಳಿದ್ದ ಹದಿನಾರುಸಾವಿರವೆಲ್ಲಿ
ಕುಸುಮಬಾಣನ ಪಡೆದ ದೇವ ತಾನೆಲ್ಲಿ
ಶಿಶುವೆನಿಪ ಅಭಿಮನ್ಯುವೆಲ್ಲಿ|೨|

ಈ ತೆರದಿ ಈ ಧರೆಯನಾಳಿಹೋದವರೆಷ್ಟು
ಈ ತೆರದಿ ಯುಗಪ್ರಳಯವಾಗಿ ಹೋದುವು ಎಷ್ಟು
ಈ ತೆರದಿ ಹರ ಬ್ರಹ್ಮರೆಷ್ಟು
ಈ ತೆರದಿ ಜಲಪ್ರಳಯವಾಗಿಹೋದುವು ಎಷ್ಟು
ಈ ತೆರದಿ ಅವತಾರವೆಷ್ಟು ಬಿಡದೆ ಶ್ರೀ
ನಾಥ ಆದಿಕೇಶವನ ಭಜಿಸಿರೊ |೩|

6 ಅಡಿಗೆಯನು ಮಾಡಬೇಕಣ್ಣ, ನಾವೀಗ ಸುಜ್ಞಾನದ
ಅಡಿಗೆಯನು ಮಾಡಬೇಕಣ್ಣ ||ಪ||
ಅಡಿಗೆಯನು ಮಾಡಬೇಕಣ್ಣ , ಮದಿಸಬೇಕು ಮದಗಳನ್ನು
ಒಡೆಯನಾಜ್ಞೆಯಿಂದ ಒಳ್ಳೆ ಸಡಗರದಿ ಈ ಮನೆಯ ಸಾರಿಸಿ ||ಅ.ಪ||

ತನ್ನ ಗುರುವನು ನೆನೆಯಬೇಕಣ್ಣ , ತನುಭಾವವೆಂಬ
ಭಿನ್ನ ಕಶ್ಮಲವಳಿಯಬೇಕಣ್ಣ
ಒನಕೆಯಿಂದ ಕುಟ್ಟಿ ಕೇರಿ ತನಗೆ ತಾನೆ ಆದ ಕೆಚ್ಚ -
ನನುವರಿತು ಇಕ್ಕಬೇಕು ಅರಿವರ್ಗವೆಂಬ ತುಂಟರಳಿಸಿ ||೧||

ತತ್ವಭಾಂಡವ ತೊಳೆಯಬೇಕಣ್ಣ , ಸತ್ಯಾತ್ಮನಾಗಿ
ಅರ್ತಿ ಅಕ್ಕಿಯ ಮಥಿಸಬೇಕಣ್ಣ
ಕತ್ತರಿ ಮನವೆಂಬ ಹೊಟ್ಟನ್ನು ಎತ್ತಿ ಒಲೆಗೆ ಹಾಕಿ ಇನ್ನು
ಹೊತ್ತಿಕೊಂಡಿಹ ಮಮತೆಯನ್ನು ಎತ್ತಿ ಹೆಸರ ಹಿಂಗಿಸುತಲಿ ||೨||

ಜನನ ಸೊಂಡಿಗೆ ಹುರಿಯಬೇಕಣ್ಣ , ನಿಜವಾಗಿ ನಿಂತು
ತನುವ ತುಪ್ಪವ ಕಾಸಬೇಕಣ್ಣ
ಕನಕಗಿರಿ ನೆಲೆಯಾದಿ ಕೇಶವದಾಸ , ಕನಕನ ಕಟ್ಟಳೆಯೊಳು
ನಿಂತು ಸುಖದ ಪಾಕವನು ಚೆಂದದಿಂ ಸವಿದುಣ್ಣಲಿಕ್ಕೆ ||೩||

7 ವಿದಿತ ದೈವಗಳೆಲ್ಲ ವಿಷ್ಣುವಿನ ಹಿಂದೆ
ಇದಕೆ ನಾ ಫಣಿಫಣವ ಕೈಯಾಗೆ ಪಿಡಿವೆ||ಪ||

ಸಕಲ ತೀರ್ಥಗಳೆಲ್ಲ ಸಾಲಿಗ್ರಾಮದ ಹಿಂದೆ
ಸಕಲ ವೃಕ್ಷಗಳೆಲ್ಲ ಶ್ರೀತುಳಸಿ ಹಿಂದೆ
ಸಕಲ ದ್ರವ್ಯಗಳೆಲ್ಲ ವಿದ್ಯಾದ್ರವ್ಯದ ಹಿಂದೆ
ಪ್ರಕಟ ಗ್ರಂಥಗಳೆಲ್ಲ ಭಾರತದ ಹಿಂದೆ|೧|

ಮತಗಳೆಲ್ಲವೂ ಮಧ್ವಮತ ಸುಸಾರದ ಹಿಂದೆ
ಇತರ ವರ್ಣಗಳೆಲ್ಲ ವಿಪ್ರರ ಹಿಂದೆ
ವ್ರತಗಳೆಲ್ಲವು ಹರಿವಾಸರ ವ್ರತದ ಹಿಂದೆ
ಅತಿಶಯದ ದಾನಗಳು ಅನ್ನದಾನದ ಹಿಂದೆ|೨|

ಉತ್ತಮಗುಣಗಳೆಲ್ಲ ಔದಾರ್ಯಗುಣದ ಹಿಂದೆ
ಮತ್ತೆ ಕರ್ಮಗಳೆಲ್ಲ ಮಜ್ಜನದ ಹಿಂದೆ
ನಿತ್ಯನೇಮಗಳು ಗಾಯತ್ರಿ ಜಪದ ಹಿಂದೆ
ಚಿತ್ತಜನಯ್ಯ ಶ್ರೀ ಪುರಂದರವಿಠಲ |೩|

8 ಇದಕೊಳ್ಳಿ ಭವರೋಗಕೌಷಧವನು ||ಪ||

ಇಂದ್ರಿಯವ ಜಯಿಸುವುದೆ ಇದಕೆ ಇಚ್ಛಾಪಥ್ಯ |ಅ.ಪ|
ವಾಸುದೇವನ ನಾಮ ವಾತವಿಧ್ವಂಸಿನೀ
ಜನಾರ್ಧನನ ನಾಮ ಜ್ವರಾಂಕುಶ
ಮಾಧವನ ನಾಮವೇ ಮನಗಂಡ ಮಂಡೂರ
ಮಂಗಳಾತ್ಮನ ನಾಮ ಮಾಲ್ಯವಸಂತ |೧|

ಚಿಂತಾಯಕನ ನಾಮ ತ್ರೈಲೋಕ್ಯ ಚಿಂತಾಮಣಿ
ಭುಜಗಶಯನನ ನಾಮ ಭೂಪತಿ ಮಾತ್ರೆ
ರಾಜೀವಲೋಚನನ ನಾಮ ರಸಕರ್ಪೂರ
ಸೀತಾಪತಿಯ ನಾಮ ದಿವ್ಯಸಿಂಧೂರ|೨|

ನಾರಾಯಣನ ನಾಮ ದಿವ್ಯ ತಾಮ್ರಭಸ್ಮ
ಲೋಕದೊಡೆಯನ ನಾಮ ಲೋಹಭಸ್ಮ
ವೈಕುಂಠಪತಿಯೆಂಬ ವಂಗಭಸ್ಮವ ಕೊಳ್ಳಿ
ಶ್ರೀನಿವಾಸನ ನಾಮ ಸ್ವರ್ಣಭಸ್ಮ |೩|

ರಾಮಚಂದ್ರನೆಂಬ ಪೂರ್ಣಚಂದ್ರೋದಯವು
ಕೃಷ್ಣ ಕೃಷ್ಣನೆಂಬ ಶ್ಲೇಷ್ಮಕುಠಾರ
ವಾರಿಜಾಂಬಕನೆಂಬ ವಸಂತಕುಸುಮಾಕರ
ಕಮಲನಾಭನೆಂಬ ಕರ್ಣಚೂರ್ಣವಿದಕೋ |೪|

ಇದನು ಕೊಂಡವರ ಪೆಸರನು ಪೇಳುವೆನು ಕೇಳಿ
ಮುದದಿ ಪ್ರಹ್ಲಾದ ಮುಚುಕುಂದ ಧ್ರುವನು
ಸದಮಲೆ ದ್ರೌಪದಿಯು ಅಜಮಿಳನು ಬದುಕಿದರು
ಪದುಮಾಕ್ಷ ಪುರಂದರವಿಠಲನೆಂಬೌಷಧವು|೫|

೯ ಏನ ಮಾಡಲಿ ಶ್ರೀ ಹರಿ ಇಂಥ
ಮಾನವಜನ್ಮ ನಚ್ಚೆಸಬಹುದೇ ? ||ಪ||

ಮಾತನಾಡದೆ ಮೌನದೊಳಿದ್ದರೆ ಮೂಕ
ನೀತನೆಂದು ಧಿಕ್ಕರಿಸುವರು
ಚಾತುರ್ಯದಿಂದಲಿ ಮಾತುಗಳಾಡಲು
ಈತನು ಬಲು ಬಾಯ್ಬಡಿಕನೆಂಬುವರಯ್ಯ|೧|

ಮಡಿ ನೇಮ ಜಪ ತಪಂಗಳ ಮಾಡುತ್ತಿದ್ದರೆ
ಬಡಿವಾರದವನೆಂದಾಡುವರು
ಮಡಿ ನೇಮ ಜಪ ತಪಂಗಳ ಮಾಡದಿದ್ದರೆ
ನಡತೆಹೀನನೆಂದು ಬಲು ನಿಂದಿಸುವರಯ್ಯ|೨|

ಗಟ್ಟಿಯಾಗಿ ಒಪ್ಪತ್ತಿನೂಟದೊಳಿದ್ದರೆ
ನಿಷ್ಠೆಯೇನು ಸುಟ್ಟಿತೆಂಬುವರು
ಗಟ್ಟಿಯಾಗಿ ಎರಡು ಮೂರು ಬಾರಿಯುಂಡರೆ
ಹೊಟ್ಟೆಬಾಕನೆಂದು ತೆಗಳಾಡುವರಯ್ಯ|೩|

ಒಲಪಿನೊಳ್ಚೆನ್ನಿಗತನವನು ಮಾಡಲು
ಬಲು ಹೆಮ್ಮೆಗಾರನೆಂದಾಡುವರು
ಸುಲಭತನದಿ ತಾ ನಿಗರ್ವಿಯಾಗಿದ್ದರೆ
ಕಲಿಯುಗದಲಿ ಮಂದಮತಿಯೆಂಬುವರಯ್ಯ|೪|

ನರ ಜನ್ಮದೊಳಗಿನ್ನು ಮುಂದೆ ಪುಟ್ಟಿಸಬೇಡ
ಮೊರೆಹೊಕ್ಕೆ ಮತ್ಸ್ಯಾವತಾರ ನಿನ್ನ
ಧರೆಯೊಳಗಿಹ ಪರಿಯಂತರ ಸಲಹೆನ್ನ
ಕರುಣಾವಾರಿಧಿ ಶ್ರೀ ಪುರಂದರವಿಠಲ|೫|

10 ಯಾರೂ ಸಂಗಡ ಬಾಹೋರಿಲ್ಲ
ನಾರಾಯಣನ ನಾಮ ನೆರೆಬಾಹೋದಲ್ಲದೆ ||

ಹೊತ್ತು ನವಮಾಸ ಪರ್ಯಂತವು ಗರ್ಭದಲಿ
ಹೆತ್ತು ಬಲು ನೋವು ಬೇನೆಗಳಿಂದಲಿ
ತುತ್ತು ಬುತ್ತಿಯ ಕೊಟ್ಟು ಸಲಹಿದಂಥಾ ತಾಯಿ
ಅತ್ತು ಕಳಹುವಳಲ್ಲದೆ ನೆರೆ ಬಹಳೆ ||

ದೇವವಿಪ್ರರು ಅಗ್ನಿಸಾಕ್ಷಿಯಿಂದಲಿ ತನ್ನ
ಭಾವಶುದ್ಧದಿ ಧಾರೆಯೆರೆಸಿಕೊಂಡ
ದೇವಿ ತನ್ನಪತಿ ತಲೆಗೆ ಕೈಯಿಟ್ಟುಕೊಂಡು ಇ-
ನ್ನಾವ ಗತಿಯೋ ಎಂದು ಅಳುತುಳಿವಳಲ್ಲದೆ ||

ಮತ್ತೆ ಪ್ರಾಣರು ತನುವ ಬಿಟ್ಟು ಹೋಗುವಾಗ
ಎತ್ತಿವನ ಹೊರಗೊಯ್ದು ಹಾಕೆಂಬರು
ಎತ್ತಿದ ಕಸಕಿಂತ ಕಡೆಯಾಯಿತೀ ದೇಹ
ವಿತ್ತವೆಷ್ಟಿದ್ದರು ಫಲವಿಲ್ಲ ಪ್ರಾಣಿ ||

ಪುತ್ರಮಿತ್ರರು ಸಕಲಬಂಧುಗಳು ಸತಿಯರು
ಹತ್ತಿರದೊಳ್ ನಿಂತು ನೋಡುವರಲ್ಲದೆ
ಮೃತ್ಯುದೇವಿಯು ಬಂದು ಪ್ರಾಣವನು ಸೆಳೆವಾಗ
ಜಾತ್ರೆ ಜನರಷ್ಟಿದ್ದು ಏನು ಮಾಡುವರು ||

ಯಮನ ದೂತರು ಬಂದು ಪಾಶವನು ತಗಲ್ಹಾಕಿ
ಮಮತೆಯಿಲ್ಲದೆ ಪ್ರಾಣ ಎಳೆಯುತಿರಲು
ವಿಮುಖನಾಗಿ ತಾನು ವ್ಯಥೆಯಿಂದ ಪೋಪಾಗ
ಕಮಲಾಕ್ಷ ಪುರಂದರವಿಠಲ ನೀನಲ್ಲದೆ ||